# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2009-10ನೇ ಸಾಲಿಗೆ ಮಂಜೂರಾದ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, ಗದಗ ಜಿಲ್ಲೆ, ಈ ಶಾಲೆಯ ಖಾಸಗಿ ಕಟ್ಟಡಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:-** ಪತ್ರ ಸಂ:ಕವಶಿಸಸ/ಸಿಆರ್(ಶಿಕ್ಷಣ)-247/2009-10, ದಿನಾಂಕ: 12-09-2012.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಗದಗ, ಗದಗ ಜಿಲ್ಲೆ, ಇಲ್ಲಿ ನಡೆಯುತ್ತಿರುವ 2009-10ನೇ ಸಾಲಿಗೆ ಮಂಜೂರಾದ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ ಲಭ್ಯವಿಲ್ಲದ ಕಾರಣ ಶ್ರೀ ಡಾ॥ ಝಾಕಿರಹಸೇನ, ಕಾಲೋನಿ, ಜಮಾತ ಮುಳಗುಂದ, ನಾಕಾ ಹತ್ತಿರ ಗದಗ ಸಂಸ್ಥೆಯ ಕಟ್ಟಡ ಕೆಳಮಹಡಿ, ಮೊದಲನೇ, ಎರಡನೇ ಹಾಗೂ ಮೂರನೇ, ಮಹಡಿ ಬಾಡಿಗೆ ಪಡೆಯಲಾಗಿದ್ದು, ಇವರ ಮಾಲೀಕತ್ವದ ಕಟ್ಟಡದಲ್ಲಿ ದಿನಾಂಕ:28-06-2011ರಿಂದ ನಡೆಸಲಾಗುತ್ತಿದ್ದು, ಸದರಿ ಬಾಡಿಗೆ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ಮಾಹೆಯಾನ ರೂ.57,699/-(ಐವತ್ತೇಳು ಸಾವಿರದ ಆರುನೂರ ತೊಂಬತ್ತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಮಾಸಿಕ ಬಾಡಿಗೆಯನ್ನು ನಿಗಧಿಪಡಿಸಿದ್ದು, ದಿನಾಂಕ:28-06-2011ರಿಂದ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ..........................................................................

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 161 ಮೊದೇಶಾ 2012 ಬೆಂಗಳೂರು,**
**ದಿನಾಂಕ:26-11-2012,**

ಗದಗ, ಗದಗ ಜಿಲ್ಲೆ, ನಿವಾಸಿಯಾದ ಶ್ರೀ ಡಾ॥ ಝಾಕಿರಹಸೇನ, ಕಾಲೋನಿ, ಜಮಾತ ಮುಳಗುಂದ, ನಾಕಾ ಹತ್ತಿರ ಗದಗ ಸಂಸ್ಥೆಯ ಕಟ್ಟಡ ಕೆಳಮಹಡಿ, ಮೊದಲನೇ, ಎರಡನೇ ಹಾಗೂ ಮೂರನೇ, ಮಹಡಿ ಬಾಡಿಗೆ ಪಡೆಯಲಾಗಿದ್ದು, ಇವರ ಮಾಲೀಕತ್ವದ ಕಟ್ಟಡದಲ್ಲಿ ದಿನಾಂಕ:28-06-2011ರಿಂದ ನಡೆಸಲಾಗುತ್ತಿರುವ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜಿನ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ಮಾಹೆಯಾನ ನಿಗಧಿಪಡಿಸಿದ ರೂ.57,699/-(ಐವತ್ತೇಳು ಸಾವಿರದ ಆರುನೂರ ತೊಂಬತ್ತೊಂಬತ್ತು ರೂಪಾಯಿಗಳು ಮಾತ್ರ) ಗಳಂತೆ ಬಾಡಿಗೆಯನ್ನು ದಿನಾಂಕ:28.06.2011ರಿಂದ ಅನ್ವಯಿಸುವಂತೆ ಹಾಗೂ ಆದಾಯ ತೆರಿಗೆಯನ್ನು TDS ಮುಖಾಂತರ ಶೇ.10 ರಷ್ಟು ಮೊತ್ತ ಕಡಿತಗೊಳಿಸಿ ಕೇಂದ್ರ ಸರ್ಕಾರದ ಲೆಕ್ಕಕ್ಕೆ ಜಮೆಗೊಳಿಸುವ ಷರತ್ತಿನೊಂದಿಗೆ ಕಟ್ಟಡದ ಮಾಲೀಕರಿಗೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ:ಸಕಕಾ 323 ಆಂಆಸ 2012, ದಿನಾಂಕ:20-10-2012 ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 1996 ದಿನಾಂಕ:10-07-1996ರಲ್ಲಿ ಸರ್ಕಾರದ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಗೆ,

1. ಮಹಾಲೇಖಪಾಲರು,(ಎ ಮತ್ತು ಇ)(ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.

....2

2. ಜಿಲ್ಲಾಧಿಕಾರಿಗಳು. ಗದಗ. ಗದಗ ಜಿಲ್ಲೆ.
3. ಆಯುಕ್ತರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಬೆಂಗಳೂರು.
4. ಕಾರ್ಯನಿರ್ವಾಹಕ ನಿರ್ದೇಶಕರು.ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. ಬೆಂಗಳೂರು.
5. ಖಜಾನಾಧಿಕಾರಿಗಳು. ರಾಜ್ಯ ಹುಜೂರ್ ಖಜಾನೆ. ಬೆಂಗಳೂರು
6. ಖಜಾನಾಧಿಕಾರಿಗಳು. ಗದಗ. ಗದಗ ಜಿಲ್ಲೆ
7. ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ. ಗದಗ. ಗದಗ ಜಿಲ್ಲೆ
8. ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ. ಗದಗ. ಗದಗ ಜಿಲ್ಲೆ
9. ಶ್ರೀ ಡಾ॥ ಝಾಕಿರಹಸೇನ. ಕಾಲೋನಿ. ಜಮಾತ ಮ ಂಳಗುಂದ. ನಾಕಾ ಹತ್ತಿರ ಗದಗ. ಗದಗ ಜಿಲ್ಲೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.